# ಸಾಮಾಜಿಕ ಮಾಧ್ಯಮ: ರಾಜಕೀಯ ಮತ್ತು ಸಾಹಿತ್ಯಿಕ ಚಳುವಳಿಗಳು

**ಶ್ರೀನಿವಾಸ ಎಸ್. ಜಿ.**

ಅಧ್ಯಾಪಕರು, ಕನ್ನಡ ವಿಭಾಗ, ಬೆಂ.ಉ.ವಿ.ವಿ. ಕೋಲಾರ.

**DOI: https://doi.org/10.5281/zenodo.18701119**

**ABSTRACT:**

ಸಾಮಾಜಿಕ ಮಾಧ್ಯಮಗಳು ಜಾಗತಿಕವಾಗಿ ರಾಜಕೀಯ ಮತ್ತು ಸಾಹಿತ್ಯಿಕ ಚಳುವಳಿಗಳ ಸ್ವರೂಪವನ್ನು ಆಮೂಲಾಗ್ರವಾಗಿ ಬದಲಿಸಿವೆ. ಅರಬ್ ಸ್ಪ್ರಿಂಗ್, ಮೀಟೂವಿನಂತಹ ಹೋರಾಟಗಳ ಮೂಲಕ ಅಂಚಿನ ಸಮುದಾಯಗಳಿಗೆ ಧ್ವನಿ ಒದಗಿಸುವಲ್ಲಿ ಡಿಜಿಟಲ್ ವೇದಿಕೆಗಳ ಪಾತ್ರವನ್ನು ಇಲ್ಲಿ ಚರ್ಚಿಸಲಾಗಿದೆ. ವಸಾಹತೋತ್ತರ ಸಾಹಿತ್ಯದ ತಾತ್ವಿಕ ನೆಲೆಗಟ್ಟಿನಲ್ಲಿ, ಅಧಿಕಾರ ಕೇಂದ್ರಗಳನ್ನು ಪ್ರಶ್ನಿಸುವ ಮತ್ತು ದೇಶಿ ಅಸ್ಮಿತೆಯನ್ನು ಮರುಸ್ಥಾಪಿಸುವ ಸಾಧನವಾಗಿ ಸಾಮಾಜಿಕ ಜಾಲತಾಣಗಳ ಕಾರ್ಯವೈಖರಿಯನ್ನು ವಿಶ್ಲೇಷಿಸಲಾಗಿದೆ. ಕನ್ನಡ ಸಾಹಿತ್ಯ ಸಂದರ್ಭದೊಂದಿಗೆ, ಎಡ್ವರ್ಡ್ ಸೈದ್ ಮತ್ತು ಗಾಯತ್ರಿ ಸ್ಪಿವಾಕ್ ಅವರ ಚಿಂತನೆಗಳನ್ನು ಅನ್ವಯಿಸಿ, ಡಿಜಿಟಲ್ ವಸಾಹತುಶಾಹಿ ಮತ್ತು ಅಲ್ಗಾರಿದಮ್ ನಿಯಂತ್ರಣದ ಅಪಾಯಗಳನ್ನೂ ಗುರುತಿಸಲಾಗಿದೆ. ಅಭಿವ್ಯಕ್ತಿ ಸ್ವಾತಂತ್ರ್ಯದ ಪ್ರಜಾಪ್ರಭುತ್ವೀಕರಣ ಮತ್ತು ತಾಂತ್ರಿಕ ಜಾಗೃತಿಯ ಅಗತ್ಯವನ್ನು ಈ ಅಧ್ಯಯನ ಒತ್ತಿಹೇಳುತ್ತದೆ.

**KEYWORDS:**

ಸಾಮಾಜಿಕ ಮಾಧ್ಯಮ, ವಸಾಹತೋತ್ತರ ಸಾಹಿತ್ಯ, ಸಾಮಾಜಿಕ ಚಳುವಳಿ, ಡಿಜಿಟಲ್ ವಸಾಹತುಶಾಹಿ, ಅಸ್ಮಿತೆ.

ಸಾಮಾಜಿಕ ಮಾಧ್ಯಮ ಒಂದು ಡಿಜಿಟಲ್ ನೆಟ್ವರ್ಕ್ ಆಗಿದ್ದು, ಏಕಕಾಲಕ್ಕೆ ಜನರನ್ನು ತನ್ನ ದೈನಂದಿನ ಚಟುವಟಿಕೆಗೆ, ಸುದ್ದಿ, ಆಲೋಚನೆ, ಸಂವಾದ, ವೈಯಕ್ತಿಕ ವಿಚಾರಗಳನ್ನು ಹಂಚಿಕೊಳ್ಳಲು ಬಳಸುವಂತಹ ವೇದಿಕೆಯಾಗಿದೆ. ಇದು ಸಮುದಾಯಗಳ ನಡುವೆ ನೆಟ್ವರ್ಕ್ ಮೂಲಕ ಸಂಪರ್ಕಿಸಲು ನೆರವಾಗುತ್ತದೆ. ಇಲ್ಲಿ ಜಾತಿ, ಧರ್ಮ, ದೇಶದ ಗಡಿ ಮುಂತಾದವುಗಳೆಲ್ಲ ಮಸುಕಾಗುತ್ತದೆ. ಸಾಮಾನ್ಯವಾಗಿ ಸಾಮಾಜಿಕ ಮಾಧ್ಯಮ ಎನ್ನುವುದು ಮೊಬೈಲ್, ಟ್ಯಾಬ್ಲೆಟ್, ಕಂಪ್ಯೂಟರ್, ಸ್ಮಾರ್ಟ್ ಫೋನ್, ಹ್ಯಾಂಡ್ ಹೆಲ್ಡ್ ಸಾಧನಗಳನ್ನು ಹೆಚ್ಚಾಗಿ ಅವಲಂಬಿಸಿರುತ್ತದೆ. ಆಧುನಿಕೋತ್ತರ ಸಂದರ್ಭದಲ್ಲಿ ಇವುಗಳನ್ನು ಅವಲಂಬಿಸಿ ಸಾಮಾಜಿಕ ಸಾಹಿತ್ಯಿಕ ಚಲನೆಗಳು ರೂಪಿತವಾಗುತ್ತವೆ.

ಈ ಲೇಖನವು ಸಾಮಾಜಿಕ ಮಾಧ್ಯಮಗಳು ರಾಜಕೀಯ ಸಾಹಿತ್ಯಿಕ ಚಳುವಳಿಗಳ ಸಂಘಟನೆ, ಪ್ರಚಾರ ಮತ್ತು ಪ್ರತಿರೋಧದ ತಂತ್ರಗಳಲ್ಲಿ ಹೇಗೆ ಕ್ರಾಂತಿಕಾರಕ ಬದಲಾವಣೆಗಳನ್ನು ತಂದಿವೆ ಎಂಬುದನ್ನು ವಿಶ್ಲೇಷಿಸುತ್ತದೆ. ಜೊತೆಗೆ, ಡಿಜಿಟಲ್ ವೇದಿಕೆಗಳಲ್ಲಿ ಉದ್ಭವಿಸುವ ಕಾವ್ಯ, ಕಥನ, ವಿಮರ್ಶೆ ಮತ್ತು ಪರ್ಯಾಯ ಸಾಹಿತ್ಯ ಚಟುವಟಿಕೆಗಳು ಸಮಕಾಲೀನ ಸಾಹಿತ್ಯಿಕ ಚಳುವಳಿಗಳಿಗೆ ಹೇಗೆ ದಿಕ್ಕು ನೀಡುತ್ತಿವೆ ಎಂಬುದನ್ನು ವಸಾಹತೋತ್ತರ ಸಾಹಿತ್ಯದ ಹಿನ್ನೆಲೆಯಲ್ಲಿ ಈ ಅಧ್ಯಯನ ಪರಿಶೀಲಿಸುತ್ತದೆ. ಸಾಮಾಜಿಕ ಮಾಧ್ಯಮಗಳು ಜಾಗತಿಕ ರಾಜಕೀಯ ಬೆಳವಣಿಗೆಗಳನ್ನು, ನಿರಂಕುಶ ಆಡಳಿತಗಳನ್ನು ಹೇಗೆ ಬುಡಮೇಲುಗೊಳಿಸಿತು ಎಂಬುದನ್ನು ಹಾಗೂ ಸಮುದಾಯಗಳ ಧ್ವನಿಯನ್ನು ಮುಖ್ಯವಾಹಿನಿಗೆ ತರುವಲ್ಲಿ ಅವುಗಳು ವಹಿಸುತ್ತಿರುವ ಪಾತ್ರವನ್ನೂ ಇಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಈ ಅಧ್ಯಯನವು ಜಾಗತಿಕ ಬೆಳವಣಿಗೆಗಳು, ಕೃತಿಗಳ ವಿಶ್ಲೇಷಣೆ ಮತ್ತು ಡಿಜಿಟಲ್ ಸಂಸ್ಕೃತಿ ಅಧ್ಯಯನವನ್ನು ಆಧಾರವಾಗಿ ತೆಗೆದುಕೊಂಡು, ಸಾಮಾಜಿಕ ಮಾಧ್ಯಮಗಳು ರಾಜಕೀಯ ಮತ್ತು ಸಾಹಿತ್ಯಿಕ ಚಳುವಳಿಗಳ ತಾತ್ವಿಕ ನೆಲೆ, ಸಂಘಟನಾ ಶಕ್ತಿ ಮತ್ತು ಸಾಮಾಜಿಕ ಪ್ರಭಾವವನ್ನು ಹೇಗೆ ಮರುರಚಿಸುತ್ತಿವೆ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಜೊತೆಗೆ ವಾಣಿಜ್ಯೀಕರಣದಂತಹ ಸವಾಲುಗಳು ಈ ಚಳುವಳಿಗಳ ಗಂಭೀರತೆಯ ಮೇಲೆ ಬೀರುವ ಪರಿಣಾಮಗಳನ್ನೂ ವಿಮರ್ಶಾತ್ಮಕವಾಗಿ ಪರಿಶೀಲಿಸುತ್ತದೆ. ಸಾಮಾಜಿಕ ಮಾಧ್ಯಮಗಳು ರಾಜಕೀಯ ಮತ್ತು ಸಾಹಿತ್ಯಿಕ ಚಳುವಳಿಗಳನ್ನು ಕೇವಲ ಅಭಿವ್ಯಕ್ತಿ ವೇದಿಕೆಯಾಗಿಯೇ ಅಲ್ಲದೆ, ಸಮಕಾಲೀನ ಸಮಾಜದಲ್ಲಿ ಪರಿವರ್ತನೆಯ ಶಕ್ತಿಶಾಲಿ ಸಾಧನಗಳಾಗಿಸುತ್ತಿವೆ ಎಂಬುದನ್ನು ಪ್ರತಿಪಾದಿಸುತ್ತದೆ.

**ಸಾಮಾಜಿಕ ಮಾಧ್ಯಮಗಳು:**

ಇವು ಇಂಟರ್‌ನೆಟ್ ಆಧಾರಿತ ವೇದಿಕೆಯಾಗಿದ್ದು, ವರ್ಚುವಲ್ ಸಮುದಾಯಗಳ ಮೂಲಕ ಬಳಕೆದಾರರ ಮಾಹಿತಿ, ಯೋಚನೆ ಮುಂತಾದವುಗಳನ್ನು ಹಂಚಿಕೊಳ್ಳಲು ನೆರವಾಗುತ್ತವೆ. ಸಾಮಾಜಿಕ ಮಾಧ್ಯಮವು ವಿಶೇಷವಾಗಿ ಯುವಜನರ ಮೇಲೆ ಆಳವಾದ ಮತ್ತು ಗಂಭೀರವಾದ ಪ್ರಭಾವವನ್ನು ಬೀರುವಂತಹದ್ದಾಗಿದೆ. ಇದು ಸಕಾರಾತ್ಮಕ ಮತ್ತು ನಕಾರಾತ್ಮಕ ಎರಡು ಹಂತದಲ್ಲೂ ಕಾಣಿಸಿಕೊಳ್ಳುತ್ತದೆ. ಸಾಮಾಜಿಕ ಮಾಧ್ಯಮ ಸಮಾಜದ ಕಣ್ಗಾವಲಿನಂತೆ ಕೆಲಸ ಮಾಡುತ್ತದೆ. ಕೆಲವೊಮ್ಮೆ ಸಮಾಜವನ್ನು ಧ್ರುವೀಕರಿಸುತ್ತದೆ ಎನ್ನಬಹುದು. ಶಿಕ್ಷಣ, ಸಂಶೋಧನೆ, ಸಾರ್ವಜನಿಕ ಸೇವಾ ವಲಯಗಳಲ್ಲಿ ಇದರ ಪಾತ್ರ ಬಹಳ ಹಿರಿದು. ಆದರೂ ಸಾಮಾಜಿಕ ಮಾಧ್ಯಮ ಸರ್ವವ್ಯಾಪಿಯಾಗಿ ಹರಡಿಕೊಂಡು ದಿನೇ ದಿನೇ ವಿಸ್ತಾರಗೊಳ್ಳುತ್ತಲೇ ಇದೆ. ವಿಶ್ವಸಂಸ್ಥೆಯ ವರದಿ ಪ್ರಕಾರ ಜಗತ್ತಿನ ಜನಸಂಖ್ಯೆಯ ಶೇಕಡ 67 ರಷ್ಟು ಜನರು ಆನ್ಲೈನ್ ನಲ್ಲಿ ಸಕ್ರಿಯರಾಗಿದ್ದಾರೆ. ದಿನೇ ದಿನೇ ಇದರ ಬಳಕೆದಾರರು ಹೆಚ್ಚಾಗುತ್ತಿದ್ದಾರೆ. ಸಾಂಪ್ರದಾಯಿಕ ಮನೋರಂಜನೆಯ ಬ್ಯಾರಿಕೇಡ್‌ಗಳನ್ನು ಇದು ಕ್ರಾಸ್ ಮಾಡಿ ಜನರಿಗೆ ತಾವು ಇರುವಲ್ಲೇ ತಮ್ಮ ಬಳಿ ಇರುವ ಸ್ಮಾರ್ಟ್ ಗ್ಯಾಜೆಟ್‌ಗಳಲ್ಲಿ ಮನೋರಂಜನೆಯನ್ನು ನೀಡುತ್ತದೆ. ಸಾಮಾಜಿಕ ಮಾಧ್ಯಮವು ಹಿಂದೆ ನಡೆದ ತೆರೆ ಮರೆಯ ಕಹಿಗಳನ್ನು, ಒಪ್ಪಂದಗಳನ್ನು, ಸಮಾಜಬಾಹಿರ ಸಂಬಂಧಗಳನ್ನು ಹೊರಗೆಳೆಯುವಲ್ಲಿ ಇದು ದೊಡ್ಡ ಪಾತ್ರವನ್ನು ವಹಿಸುತ್ತದೆ. ಚಿತ್ರರಂಗ ಹಾಗೂ ಇತರೆ ಮಾಧ್ಯಮ ರಂಗದಲ್ಲಿ ನಡೆದಿದ್ದ 'ಮೀಟೂ' ಪ್ರಕರಣಗಳು, ಇವುಗಳ ಮೂಲಕ ಹೊರಗೆ ಬರಲು ಪ್ರಮುಖವಾದ ಪಾತ್ರವನ್ನು ವಹಿಸಿದೆ. ಜಗತ್ತಿನ ಹಲವು ಚಳುವಳಿಗಳು ರೂಪಗೊಳ್ಳಲು ಸಾಮಾಜಿಕ ಮಾಧ್ಯಮಗಳು ಕಾರಣವಾಗಿದೆ.

ಸಾಮಾಜಿಕ ಮಾಧ್ಯಮಗಳು ಸಾಮಾಜಿಕ ಜವಾಬ್ದಾರಿಯನ್ನು ನಿರ್ವಹಿಸಲು ಉತ್ತಮ ವೇದಿಕೆಯಂತೆ ಕೆಲಸ ಮಾಡುತ್ತಿದೆ. ನೈಸರ್ಗಿಕ ವಿಕೋಪ, ರಕ್ತದಾನ, ಅಂಗಾಂಗ ದಾನ ಹಾಗೂ ತುರ್ತು ನೆರವು ಸಾಗಾಟಕ್ಕೆ ಇವುಗಳು ನಡೆಸುವ ಅಭಿಯಾನ ನಿರ್ಣಾಯಕ ಪಾತ್ರ ವಹಿಸುತ್ತವೆ. ಇಂದು ಭಾರತವು ಚೀನಾ ನಂತರದ ಅತಿ ದೊಡ್ಡ ಆನ್ಲೈನ್ ಮಾರುಕಟ್ಟೆಯಾದ 5ಜಿ ಬಳಕೆಯಿಂದಾಗಿ ಸಾಮಾಜಿಕ ಮಾಧ್ಯಮ ಬಳಕೆಯ ವೇಗವು ಹೆಚ್ಚಾಗಿದೆ. ಸಾಮಾಜಿಕ ಮಾಧ್ಯಮಗಳು ಇಂದಿನ ಆಧುನಿಕ ಮಾನವನ ದಿನಚರಿಯಂತೆ ಕಾರ್ಯನಿರ್ವಹಿಸುತ್ತಿದೆ. ಟಿವಿ ಮಾಧ್ಯಮಗಳು, ವೃತ್ತ ಪತ್ರಿಕೆಗಳು ಒದಗಿಸುತ್ತಿದ್ದ ಸುದ್ದಿಗಳನ್ನು ಇಂದು ಕ್ಷಣಾರ್ಧದಲ್ಲಿಯೇ ಒದಗಿಸುತ್ತಿವೆ. ಸಾಮಾಜಿಕ ಮಾಧ್ಯಮ ವೇದಿಕೆಗಳು ಬೇರೆ ಬೇರೆ ರಂಗದ ವ್ಯಕ್ತಿಗಳ ಮೇಲೆ ವೈಯಕ್ತಿಕ, ಬೆದರಿಕೆ ಸ್ವರೂಪದ, ಡಿಜಿಟಲ್ ಸ್ವರೂಪದ, ಸಂಘಟಿತ ದಾಳಿ ಮಾಡುವ ಹೀನ

ಕೃತ್ಯಕ್ಕೆ ಅನುವು ಮಾಡಿಕೊಡುತ್ತದೆ. ಜೊತೆಗೆ ಮಹಿಳೆಯರು ಸೈಬರ್ ನಿಂದನೆ, ಅತ್ಯಾಚಾರದಂತಹ ಹೀನ ಬೆದರಿಕೆಗಳಿಗೆ ಒಳಗಾಗುತ್ತಿದ್ದಾರೆ. ಅವರ ಘನತೆ ಮತ್ತು ತೇಜೋವಧೆ ಮಾಡುವಂತಹ ಕೃತ್ಯಗಳಿಗೆ ಈ ಸಾಮಾಜಿಕ ಮಾಧ್ಯಮ ಕಾರಣವಾಗುತ್ತಿರುವುದನ್ನು ನೋಡಬಹುದು.

**1. ರಾಜಕೀಯ ಮತ್ತು ಸಾಮಾಜಿಕ ಚಳುವಳಿಗಳ ಹುಟ್ಟುವಳಿ:**

ಸಾಮಾಜಿಕ ಮಾಧ್ಯಮವು ಚರ್ಚೆ ಮತ್ತು ಸಂವಾದಾತ್ಮಕ ವರ್ಚುಯಲ್ ಸಮುದಾಯ ತಾಣಗಳಾದ್ದರಿಂದ ಪರಿಕಲ್ಪನೆಯ ರಚನೆ, ನೀಲಿನಕ್ಷೆ, ಚರ್ಚೆ ಮತ್ತು ಗುಂಪುಗೂಡುವಿಕೆಯನ್ನು ಸಮನ್ವಯಗೊಳಿಸುತ್ತದೆ. ಇಂಥವು ಮುಖ್ಯವಾಗಿ ವಿಷಯದ ಪೋಸ್ಟರ್, ಫೋಟೋಗಳು, ವಿಡಿಯೋಗಳು, ಕಾಮೆಂಟ್‌ಗಳು, ಧ್ವನಿಮುದ್ರಿಕೆಗಳು, ಆನ್ಲೈನ್ ಸಂವಹನ ಮೂಲಕ ಹಂಚಿಕೆಗೊಳ್ಳುತ್ತದೆ. ಇಂತಹ ವೈವಿಧ್ಯಮಯ ಮಾಧ್ಯಮ ವೇದಿಕೆಗಳು ಸಾಮಾಜಿಕ ಮೌಲ್ಯಗಳು, ರೂಢಿಗಳು ಮತ್ತು ಬದಲಾವಣೆಗಳು ಅಗತ್ಯವಾದಲ್ಲಿ ಪರಿವರ್ತನೆ ತರುವಲ್ಲಿ ನಿರ್ಣಾಯಕ ಪಾತ್ರವಹಿಸುತ್ತವೆ. ಸಾಮಾಜಿಕ ಚಳುವಳಿಯು ಚಾಲನ ಶಕ್ತಿಯಂತೆ ಹೆಚ್ಚು ಕಾರ್ಯ ನಿರ್ವಹಿಸುತ್ತವೆ. ಮುಖ್ಯವಾಗಿ ಅಂಚಿನ ಸಮುದಾಯಗಳು, ದಮನಿತ ಸಮುದಾಯಗಳು, ಅಲೆಮಾರಿ, ಹಿಂದುಳಿದ, ಶೋಷಿತ ಸಮುದಾಯಗಳು ಒಟ್ಟಾರೆ ಧ್ವನಿ ಇಲ್ಲದ ಸಮುದಾಯಗಳಿಗೆ ಸಾಮಾಜಿಕ ಮಾಧ್ಯಮ ಪ್ಲಾಟ್‌ಫಾರಂಗಳು ಧ್ವನಿ ಒದಗಿಸುತ್ತವೆ. ನಾಯಕರಿಲ್ಲದ ಸಮುದಾಯ ಮತ್ತು ಚಳುವಳಿಗಳ ನೇಕಾರನಂತೆ ಇವು ಕಾರ್ಯ ನಿರ್ವಹಿಸುತ್ತವೆ. ಪ್ರತಿಭಟನೆ, ಚಳುವಳಿ ಮುಂತಾದ ಜನಾಕ್ರೋಶಗಳನ್ನು ಈ ವೇದಿಕೆಗಳು ಪ್ರಜಾಪ್ರಭುತ್ವಗೊಳಿಸುತ್ತವೆ. ಸಾಮಾಜಿಕ ಚಳುವಳಿಗಳಿಗೆ ಹಣಕಾಸು, ಪ್ರಚಾರ, ಸಂಘಟನೆ ಮುಂತಾದವುಗಳಿಗೆ ತಗಲುವ ವೆಚ್ಚಗಳನ್ನು ಇವು ಕಡಿಮೆ ಮಾಡುತ್ತದೆ. ಸಮಾನ ಮನಸ್ಕರನ್ನು, ಸಮಾನ ಚಿಂತನೆಗಳನ್ನು ತಲುಪಲು ಇರುವ ಅಡೆತಡೆಗಳನ್ನು ಮುರಿಯುತ್ತವೆ.

ಡಿಜಿಟಲ್ ವೇದಿಕೆಗಳು ಸಾಂಪ್ರದಾಯಿಕ ಮೌಢ್ಯಾಧಾರಿತ ತಡೆಗಳನ್ನು ಹೊಡೆದು ಸಾಂಸ್ಕೃತಿಕ ಸಂವಹನ ನಡೆಯಲು ಅನುವು ಮಾಡಿಕೊಡುತ್ತವೆ. ಉದಾಹರಣೆ: #'ಮೀಟೂ' ಎಂಬ ಚಳುವಳಿ. ಇದು ಹುಟ್ಟಿದ್ದೆ ಸಾಮಾಜಿಕ ಮಾಧ್ಯಮ ವೇದಿಕೆಯಲ್ಲಿ. ಇದು ಹಲವಾರು ದೇಶಗಳ ಗಡಿಯನ್ನು ದಾಟಿ ಲಿಂಗಧಾರಿತ ಹಿಂಸೆ, ಶೋಷಣೆಗಳನ್ನು ವಿರೋಧಿಸಿ, ಕಾನೂನಾತ್ಮಕ ಸುಧಾರಣೆ ತರಲು ಕಾರಣವಾಯಿತು. ಸಾಮಾಜಿಕ ಮಾಧ್ಯಮವು ಸಾಂಸ್ಕೃತಿಕ ಕ್ರಾಂತಿ ಮತ್ತು ಸಾಮಾಜಿಕ ಚಳುವಳಿಯ ಚಲನಶೀಲತೆಯನ್ನು ಮೂಲಭೂತವಾಗಿ ಬದಲಾಯಿಸುತ್ತದೆ. ನಿರ್ದಿಷ್ಟ ಚಳುವಳಿಗಳು ಕ್ರಿಯಾಶೀಲಗೊಳ್ಳಲು ಅಜೆಂಡಗಳ ಪರ ವಕಾಲತ್ತು ವಹಿಸಲು ಪ್ರಬಲ ಸಾಧನದಂತೆ ಕೆಲಸ ಮಾಡುತ್ತದೆ. ಉದಾಹರಣೆಗೆ ಸಾಮಾಜಿಕ ಮಾಧ್ಯಮ ಕೇಂದ್ರದಿಂದಲೇ ಹರಡಿ ಬದಲಾವಣೆಗೆ ಕಾರಣವಾದ ಜಗತ್ತಿನ ಮುಖ್ಯ ವಿದ್ಯಮಾನಗಳನ್ನು ಗಮನಿಸಬಹುದು.

**ಅರಬ್ ಸ್ಪ್ರಿಂಗ್:** 2010 ರಲ್ಲಿ ಪ್ರಾರಂಭವಾದ ಈ ಚಳುವಳಿಯು ಸೋಶಿಯಲ್ ಮೀಡಿಯಾ ಕಣ್ಣು ತೆರೆಯುವ ಕಾಲದಲ್ಲಿ ಪ್ರಬಲವಾಗಿ ಸಂಭವಿಸಿದ ಚಳುವಳಿ. ಇದರಿಂದ ಉತ್ತರ ಆಫ್ರಿಕಾ ದೇಶಗಳಲ್ಲಿ ಪ್ರತಿಭಟನೆ ಮತ್ತು ಸರ್ಕಾರಿ ವಿರೋಧಿ ದಂಗೆಗಳು ಅತಿಯಾಗಿದ್ದ ಈ ಆಂದೋಲನವು ದೇಶದಲ್ಲಿ ಸಾಮಾಜಿಕ ನ್ಯಾಯ ಮತ್ತು ನಿರಂಕುಶ ಆಡಳಿತಗಳಿಗೆ ಕೊನೆ ಹಾಡಲು ಮುಂದಾಯಿತು. ಅರಬ್ ಸ್ಪ್ರಿಂಗ್ ಬಾಧಿತ ದೇಶಗಳೆಂದರೆ ಟುನಿಶಿಯಾ ನಂತರ ಅರಬ್, ಈಜಿಪ್ಟ್, ಲಿಬಿಯಾ ಹಾಗೂ ಮುಂತಾದ ದೇಶಗಳಿಗೆ ಹರಡಿ ಆರ್ಥಿಕ ಅಸಮಾನತೆ,

ಭ್ರಷ್ಟಾಚಾರ, ನಿರಂಕುಶ ಆಡಳಿತ ವಿರೋಧಿಯಾಗಿ ಜನಮುಖಿ ಆಂದೋಲನದ ಭಾಗವಾಗಿ ಧನಾತ್ಮಕ ಬದಲಾವಣೆಯನ್ನು ತರಲು ಸಾಮಾಜಿಕ ಮಾಧ್ಯಮಗಳು ದೊಡ್ಡ ವೇದಿಕೆಯಂತೆ ಕೆಲಸ ಮಾಡಿದವು.

**ಬ್ಲಾಕ್ ಲೈವ್ ಮ್ಯಾಟರ್:** ಇದೊಂದು ವಿಕೇಂದ್ರೀಕೃತ ರಾಜಕೀಯ ಮತ್ತು ಸಾಮಾಜಿಕ ಚಳುವಳಿ. ಇದು ಕಪ್ಪು ಜನರು ಅನುಭವಿಸಿದ ಜನಾಂಗೀಯ ತಾರತಮ್ಯ, ಅಸಮಾನತೆಗಳನ್ನು ಎತ್ತಿ ತೋರಿಸಲು ಜನಾಂಗದ ಆಧಾರದ ಮೇಲೆ ಮಾಡುವ ಎಲ್ಲಾ ಬಗೆಯ ತಾರತಮ್ಯವನ್ನು ವಿರೋಧಿಸುವ ಗುರಿಯನ್ನು ಹೊಂದಿತ್ತು. ಸೋಶಿಯಲ್ ಮೀಡಿಯಾ ಬಳಕೆಯಿಂದಾಗಿ ವರ್ಣಭೇದ ನೀತಿಯನ್ನು ಅತ್ಯಂತ ಪ್ರಬಲವಾಗಿ ವಿರೋಧಿಸಲು ಈ ಚಳುವಳಿ ಎಲ್ಲೆಡೆ ಪ್ರಸಾರಗೊಳ್ಳಲು ಕಾರಣವಾಯಿತು.

**ಮೀಟೂ:** ಈ ಆಂದೋಲನವು ಲೈಂಗಿಕ ಕಿರುಕುಳ ಮತ್ತು ಲಿಂಗಧಾರಿತ ಅಸಮಾನತೆಯ ವಿರುದ್ಧ ನಡೆದ ಸಾಮಾಜಿಕ ಆಂದೋಲನವಾಗಿದೆ. ವಿವಿಧ ರಂಗಗಳಲ್ಲಿ ಕೆಲಸ ಮಾಡುವ ಅನೇಕ ಮಹಿಳೆಯರು ಲೈಂಗಿಕ ಕಿರುಕುಳ ಮತ್ತು ಆಕ್ರಮಣ ಮತ್ತು ಶೋಷಣೆ ಅನುಭವಿಸಿದ ವೈಯಕ್ತಿಕ ಕಥೆಗಳನ್ನು ಹಂಚಿಕೊಳ್ಳಲು ತೊಡಗಿದರು. ಈ ಚಳುವಳಿ ಲಿಂಗ ಜಾಗೃತಿ ಮೂಡಿಸುವ ಗುರಿಯನ್ನು, ಬದುಕುಳಿದವರಲ್ಲಿ ಮಾನಸಿಕ ಸ್ಥೈರ್ಯವನ್ನು ತುಂಬುವಲ್ಲಿ ಈ ಚಳುವಳಿ ಯಶಸ್ವಿಗೊಂಡಿತು.

**ಫ್ರೈಡೇ ಫಾರ್ ಫ್ಯೂಚರ್:** ಹವಾಮಾನ ಬದಲಾವಣೆಯ ವಿರುದ್ಧ ಹಾಗೂ ಭವಿಷ್ಯಕ್ಕಾಗಿ ಈ ಭೂಮಿಯ ಆರೋಗ್ಯವನ್ನು ಕಾಪಾಡಲು ವಿದ್ಯಾರ್ಥಿಗಳು ಮತ್ತು ಯುವಜನರ ನೇತೃತ್ವದ ಹವಾಮಾನ ಕೇಂದ್ರಿತ ಚಳುವಳಿಯಾಗಿತ್ತು.

**ಲವ್ ಈಸ್ ಲವ್:** LGBTQ+ ಜನರು ತಮ್ಮ ಹಕ್ಕು ಬಾಧ್ಯತೆ, ಸಮಾನತೆ ಮುಂತಾದ ವಿಷಯಗಳಲ್ಲಿ ಸಮುದಾಯಗಳು ಈ ಜನರನ್ನು ಸ್ವೀಕಾರ ಮಾಡುವುದನ್ನು ಉತ್ತೇಜನ ಮಾಡಲು ನಡೆದ ಸಾಮಾಜಿಕ ಮಾಧ್ಯಮ ಕೇಂದ್ರೀತ ಚಳುವಳಿಯಾಗಿದೆ.

**ಡಿಸೆಬಿಲಿಟಿ ರೈಟ್ಸ್:** ವಿಕಲಚೇತನರ ಬಗ್ಗೆ ಸಮಾಜದ, ಸರ್ಕಾರಿ ಅಧಿಕಾರಿಗಳ ಹಕ್ಕುಗಳ ಬಗೆಗೆ ಅರಿವು & ಶಿಕ್ಷಣ ನೀಡುವುದು ಜೊತೆಗೆ ಮುಖ್ಯ ವಾಹಿನಿಗೆ ಸೇರ್ಪಡೆಗೊಳ್ಳುವಿಕೆ ಹಾಗೂ ವಿಕಲಚೇತನರ ಹಕ್ಕುಗಳಿಗಾಗಿ ನಡೆದ ಆಂದೋಲನವಾಗಿದೆ.

**ಹ್ಯಾಪಿ ಟು ಬ್ಲೀಡ್:** ಹೆಣ್ಣು ಮಕ್ಕಳ ಮುಟ್ಟಿನ ಮೇಲೆ ಇರುವ ಸಾಮಾಜಿಕ ಕುರುಡು ನಂಬಿಕೆಗಳನ್ನು ತೊಡೆದು ಹಾಕಲು ಮುಟ್ಟಿನ ಸುತ್ತಾ ಇರುವ ಕಳಂಕವನ್ನು ಸವಾಲು ಮಾಡುವ ಆಂದೋಲನವಾಗಿದೆ. ಇದು ಮುಟ್ಟಿನ ವಯಸ್ಸಿನ ಮಹಿಳೆಯರ ಮೇಲೆ ಇದ್ದ ದೇವಾಲಯದ ನಿಷೇಧಕ್ಕೆ ಪ್ರತಿಕ್ರಿಯೆಯಾಗಿ ಚಳುವಳಿ ಪ್ರಾರಂಭವಾಯಿತು.

**ನಿರ್ಭಯ ಆಂದೋಲನ:** ದೆಹಲಿಯಲ್ಲಿ ನಡೆದ ಸಾಮೂಹಿಕ ಅತ್ಯಾಚಾರ ಮತ್ತು ಹತ್ಯೆ ವಿರುದ್ಧ ನಡೆದ ಚಳುವಳಿ. ಲೈಂಗಿಕ ದೌರ್ಜನ್ಯದ ವಿರುದ್ಧ ಮಹಿಳೆಯರಿಗೆ ರಕ್ಷಣೆ ಮತ್ತು ಕಠಿಣ ಕಾನೂನಿನ ಬೇಡಿಕೆಗಳಿಗಾಗಿ ನಡೆದ ಭಾರತದ ಚಳುವಳಿಯಾಗಿದೆ.

ಸಾಮಾಜಿಕ ಮಾಧ್ಯಮವು ಸಾಮಾಜಿಕ ಆಂದೋಲನಗಳನ್ನು ಸಂಘಟಿಸಿದೆ, ಮುನ್ನಡೆಸಿದೆ, ಮುಕ್ತಾಯಗೊಳಿಸಿದೆ ಎಂದರೆ ಅತಿಶಯೋಕ್ತಿಯಲ್ಲ. ಹ್ಯಾಷ್‌ಟ್ಯಾಗ್, ಆನ್ಲೈನ್ ಚರ್ಚೆ ಮತ್ತು ಪ್ರಚಾರಗಳು ವೈರಲ್ ಮಾಡುವ ಸಂಗತಿಗಳಿಂದ ಸಾಮಾಜಿಕ ಸಂಗತಿಗಳು ಅಥವಾ ಚಳುವಳಿಗಳು ಯಶಸ್ಸನ್ನು ಕಾಣುತ್ತವೆ. ಆದರೆ ತಂತ್ರಜ್ಞಾನ ಬದಲಾದಂತೆ ಸಾಮಾಜಿಕ

ಮಾಧ್ಯಮದ ವೇದಿಕೆಗಳು ಬದಲಾಗುತ್ತಿರುತ್ತವೆ. ಜೊತೆಗೆ ಅವುಗಳ ನಿಯಂತ್ರಣಗಳು ಆಗುತ್ತಲೇ ಇರುತ್ತವೆ. ಇವು ಚಳುವಳಿಗಳ ಮೇಲೆ ಪರಿಣಾಮ ಬೀರಬಹುದು.

ಸಾಮಾಜಿಕ ಮಾಧ್ಯಮ ಮತ್ತು ಸಾಂಸ್ಕೃತಿಕ ಚಳುವಳಿಗಳ ನಡುವೆ ಸಂಬಂಧಗಳು ಸಂಕೀರ್ಣ ಮತ್ತು ಬಹುಮುಖಿಯಾಗಿವೆ. ಜೊತೆಗೆ ಸಾಮಾಜಿಕ ಬದಲಾವಣೆಗೆ ಪ್ರಬಲ ಸಾಧನಗಳು ಆಗಿವೆ. ಸಾಮಾಜಿಕ ಮಾಧ್ಯಮಗಳ ಮಿತಿಯನ್ನು ಅರಿತುಕೊಂಡು ಅವುಗಳನ್ನು ಜವಾಬ್ದಾರಿಯುತವಾಗಿ ಬಳಕೆ ಮಾಡಿಕೊಂಡರೆ ಸಮಾಜದಲ್ಲಿ ಧನಾತ್ಮಕ ಬದಲಾವಣೆಯನ್ನು ತರಲು ಯಾವುದೇ ತೊಂದರೆ ಇರುವುದಿಲ್ಲ.

**2. ವಸಾಹತೋತ್ತರ ಸಾಹಿತ್ಯಿಕ ಚಳುವಳಿಗಳು:**

ಈ ಚಳವಳಿ ಕೇವಲ ಸಾಹಿತ್ಯಾಧ್ಯಯನಕ್ಕೆ ಮಾತ್ರ ಸೀಮಿತವಾದುದ್ದಲ್ಲ. ಅದು ಅಧಿಕಾರ, ಅಸ್ಮಿತೆ, ಭಾಷೆ ಮತ್ತು ಸಾಂಸ್ಕೃತಿಕ ಚಿಂತನೆಗಳ ಮರುಸ್ಥಾಪನೆಯ ಹೋರಾಟ. ಬ್ರಿಟಿಷ್ ಸಾಮ್ರಾಜ್ಯಶಾಹಿಯ ಅಡಿಯಲ್ಲಿ ಆಡಳಿತಕ್ಕೆ ಒಳಪಟ್ಟ ರಾಷ್ಟ್ರಗಳು ಸ್ವಾತಂತ್ರ್ಯದ ನಂತರ ತಮ್ಮದೇ ಆದ 'ಧ್ವನಿ'ಯನ್ನು ಕಂಡುಕೊಳ್ಳಲು ನಡೆಸಿದ ಪ್ರಯತ್ನವೇ ಈ ಚಳುವಳಿ ಉದ್ದೇಶ.

**ವಸಾಹತೋತ್ತರ ಸಿದ್ಧಾಂತ:** ವಸಾಹತೋತ್ತರ ಸಾಹಿತ್ಯವು ಮುಖ್ಯವಾಗಿ ಎಡ್ವರ್ಡ್ ಸೈದ್ ಅವರ 'ಓರಿಯಂಟಲಿಸಂ' (Orientalism) ನಂತಹ ಕೃತಿಗಳಿಂದ ಮುಖ್ಯವಾಗಿ ಪ್ರಭಾವಿತವಾಗಿದೆ ಎನ್ನಬಹುದು. ಪಾಶ್ಚಿಮಾತ್ಯರು ಪೌರ್ವಾತ್ಯ ದೇಶಗಳನ್ನು 'ಅನಾಗರಿಕ' ಎಂದು ಬಿಂಬಿಸಿದ್ದನ್ನು ವಿರೋಧಿಸಿ, ನಮ್ಮ ಇತಿಹಾಸವನ್ನು ನಮ್ಮದೇ ಕಣ್ಣುಗಳಿಂದ ನೋಡಿ ಪ್ರತಿಕ್ರಿಯಿಸುವಲ್ಲಿ ಹಾಗೂ ಮರು ರೂಪಿಸುವಲ್ಲಿ ಯಶಸ್ವಿಯಾಯಿತು.

**ವಸಾಹತೋತ್ತರ ಸಾಹಿತ್ಯದ ಮುಖ್ಯಾಂಶಗಳನ್ನು ಹೀಗೆ ಗ್ರಹಿಸಬಹುದು:**

**ಕೌಂಟರ್ ಡಿಸ್ಕೋರ್ಸ್:** ಇದು ಈಗಾಗಲೇ ಸಮಾಜದಲ್ಲಿ ಚಾಲ್ತಿಯಲ್ಲಿರುವ ಪ್ರಬಲ ವಿಚಾರಗಳು ಅಥವಾ ಸಿದ್ಧಾಂತಗಳನ್ನು ಪ್ರಶ್ನಿಸುವ ಮತ್ತು ಅವುಗಳಿಗೆ ಪರ್ಯಾಯವಾದ ದೃಷ್ಟಿಕೋನವನ್ನು ನೀಡುವ ಪ್ರಕ್ರಿಯೆಯೇ. ವಸಾಹತುಶಾಹಿಗಳು ಹೇರಿದ ಭಾಷೆ ಮತ್ತು ಸಂಸ್ಕೃತಿಗೆ ವಿರುದ್ಧವಾಗಿ ಸ್ಥಳೀಯ ನುಡಿಗಟ್ಟುಗಳನ್ನು ಬಳಸುವುದು. ಬ್ರಿಟಿಷರು ಭಾರತೀಯರನ್ನು ಅನಾಗರಿಕ ಎಂದು ಕರೆದಾಗ ಭಾರತೀಯರು ತಮ್ಮ ಸಂಸ್ಕೃತಿಯ ಶ್ರೀಮಂತಿಕೆಯ ಅಸ್ಮಿತೆಗಳ ಮೂಲಕ ಕೌಂಟರ್ ನೀಡುವುದು.

**ಅಸ್ಮಿತೆಯ ಶೋಧ:** ನಾನು ಯಾರು? ನಮ್ಮ ಸಂಸ್ಕೃತಿ ನಮ್ಮ ಭಾಷೆ ಯಾವುದು ಎಂಬ ಪ್ರಶ್ನೆಗೆ ಪಾಶ್ಚಿಮಾತ್ಯರ ಕಣ್ಣೋಟದ ಕನ್ನಡಕವಿಲ್ಲದೆ ಉತ್ತರ ಹುಡುಕುವುದು. ಅಪ್ಪಟ ದೇಸೀ ಮತ್ತು ವಸಾಹತುಶಾಹಿ ಸಂಸ್ಕೃತಿಗಳ ಮಿಶ್ರಣದಿಂದ ಉಂಟಾದ ಹೊಸ ಹೈಬ್ರಿಡಿಟಿ ವಿಶ್ಲೇಷಣೆ. ಕಳೆದುಹೋದ ಅಸ್ಮಿತೆಯನ್ನು ಮರುಸ್ಥಾಪಿಸುವ ಪ್ರಯತ್ನ ಇಲ್ಲಿ ಕಂಡುಬರುತ್ತದೆ.

**ಸಾಮ್ರಾಜ್ಯಶಾಹಿ ಪ್ರತಿರೋಧ:** ಸಾಮ್ರಾಜ್ಯಶಾಹಿ ಶಕ್ತಿಗಳ ವಿರುದ್ಧದ ಒಂದು ಧ್ವನಿ ಎತ್ತುವುದೂ ಸಹ ವಸಾಹತೋತ್ತರ ಚಿಂತನೆಯಿಂದಲೇ ಮರು ಹುಟ್ಟಿದ ಚಿಂತನೆಯಾಗಿದೆ. ಪಾಶ್ಚಿಮಾತ್ಯರು ಬಿತ್ತಿಬೆಳೆದ ಅಪಕಲ್ಪನೆಗಳನ್ನು ಮತ್ತು ಅವರ ಸಾಂಸ್ಕೃತಿಕ ಹೇರಿಕೆಯನ್ನು ಈ ಸಾಹಿತ್ಯ ಪ್ರಶ್ನಿಸುತ್ತದೆ.

**ಭಾಷೆಯ ರಿಕ್ಲೈಮಿಂಗ್ (ನುಡಿಗಳ ಮರುಬಳಕೆ):** ಒಂದು ಕಾಲದಲ್ಲಿ ಒಂದು ಸಮುದಾಯವನ್ನು ನಿಂದಿಸಲು ಬಳಸುತ್ತಿದ್ದ ಪದಗಳನ್ನು, ಅದೇ ಸಮುದಾಯದವರು ಹೆಮ್ಮೆಯಿಂದ ಮತ್ತು ಸಬಲೀಕರಣದ ಸಂಕೇತವಾಗಿ ಭಾಷೆಯನ್ನು ರಿಕ್ಲೈಮ್ ಮಾಡುವುದು.

ಅವಮಾನಕಾರಿ ಪದದ ಅರ್ಥವನ್ನು ಬದಲಿಸಿ, ಅದನ್ನು ಪ್ರತಿರೋಧ ಮತ್ತು ಸಾಂಸ್ಕೃತಿಕ ಅಸ್ಮಿತೆಯ ಭಾಗವಾಗಿಸುವುದು. ಉದಾ: ವಸಾಹತುಶಾಹಿಗಳು ಹೇರಿದ ಭಾಷೆಯನ್ನು (ಇಂಗ್ಲಿಷ್) ಅದೇ ಭಾಷೆಯಲ್ಲಿ ಅವರಿಗೆ ಉತ್ತರ ನೀಡಲು ಬಳಸುವುದು. ಇಂಗ್ಲಿಷ್ ಭಾಷೆಯನ್ನು ಸ್ಥಳೀಯ ಶೈಲಿಗೆ ತಕ್ಕಂತೆ ಮಾರ್ಪಡಿಸಿಕೊಳ್ಳುವುದು ಇದರ ವಿಶೇಷತೆ.

**ಸ್ಥಳೀಯ ಸಂಸ್ಕೃತಿಯ ಪುನರುತ್ಥಾನ:** ವಸಾಹತುಶಕ್ತಿಗಳು ಅಲ್ಲಗಳೆದ ಅಥವಾ ತುಳಿದ ಸಂಸ್ಕೃತಿ, ಪರಂಪರೆ, ಭಾಷೆ, ನಂಬಿಕೆಗಳನ್ನು ಮರುಸ್ಥಾಪಿಸುವ ಪ್ರಯತ್ನ ಇಲ್ಲಿ ಕಂಡುಬರುತ್ತದೆ. ಪಾಶ್ಚಾತ್ಯ ಸಂಸ್ಕೃತಿ ಮತ್ತು ಸ್ಥಳೀಯ ಸಂಸ್ಕೃತಿಗಳ ನಡುವೆ ಉಂಟಾಗುವ ಸಂಘರ್ಷವನ್ನು ಚಿತ್ರಿಸುವುದನ್ನು ಕಾಣಬಹುದು.

**ಚರಿತ್ರೆಯ ಮರುನಿರೂಪಣೆ:** ಪಾಶ್ಚಿಮಾತ್ಯರು ಬರೆದ ಇತಿಹಾಸವು ಹೆಚ್ಚಾಗಿ ಅವರ ಪರವಾಗಿಯೇ ಇರುತ್ತಿದುದ್ದನ್ನು ಮುರಿದು ಕಟ್ಟುವುದು, ಎಂದರೆ ವಸಾಹತುಶಾಹಿ ಆಡಳಿತಗಾರರು ತಮ್ಮ ಅನುಕೂಲಕ್ಕೆ ತಕ್ಕಂತೆ ಬರೆದಿದ್ದ ಇತಿಹಾಸವನ್ನು ಭಾರತೀಯ ಅಥವಾ ಸ್ಥಳೀಯ ದೃಷ್ಟಿಕೋನದಿಂದ ಮರುಪರಿಶೀಲಿಸಿ ಬರೆಯುವ ಪ್ರಕ್ರಿಯೆಯಾಗಿದೆ. ಭಾರತ ಮತ್ತು ಆಫ್ರಿಕಾದ ಇತಿಹಾಸವನ್ನು 'ಹಿಂದುಳಿದ' ಮತ್ತು 'ಅನಾಗರಿಕ' ಎಂದು ಬಿಂಬಿಸುವ ಯತ್ನಗಳನ್ನು ಹಿಮ್ಮೆಟ್ಟಿಸಿ ಆ ದೇಶಗಳ ಶ್ರೀಮಂತ ಸಂಸ್ಕೃತಿ ಮತ್ತು ಜ್ಞಾನ ಪರಂಪರೆಯನ್ನು ಎತ್ತಿಹಿಡಿಯುವುದು ಇದರ ಉದ್ದೇಶ.

**3. ಸಾಹಿತ್ಯ ಚಳುವಳಿ ಸ್ವರೂಪದ ಚಿಂತನಾ ಮಾದರಿಗಳು:**

ಇತಿಹಾಸವೆಂದರೆ ಕೇವಲ ರಾಜರು ಮತ್ತು ಬ್ರಿಟಿಷ್ ಅಧಿಕಾರಿಗಳ ಕಥೆಯಾಗದೆ ಅದು ಸಾಮಾನ್ಯ ಜನರು, ರೈತರು, ಬುಡಕಟ್ಟು ಜನಾಂಗದವರು, ಮಹಿಳೆಯರು ಮತ್ತು ಶೋಷಿತರ ಹೋರಾಟಗಳನ್ನು ಒಳಗೊಂಡಿರಬೇಕು ಎಂಬುದು ವಸಾಹತೋತ್ತರ ಸಾಹಿತ್ಯದ ಮುಖ್ಯ ಆಶಯ. ಶೋಷಿತರ ಅಥವಾ ಸ್ಥಳೀಯರ ದೃಷ್ಟಿಕೋನದಿಂದ ಇತಿಹಾಸವನ್ನು ಮರುಚಿಂತನೆಗೆ ಒಳಪಡಿಸುವ ಹಲವಾರು ಜಾಗತಿಕ ಚಿಂತಕರನ್ನು ಹೆಸರಿಸಬಹುದಾಗಿದೆ. ಉದಾಹರಣೆಗೆ, ಚಿನುವಾ ಅಚೆಬೆ ಅವರ ಥಿಂಗ್ಸ್ ಫಾಲ್ ಅಪಾರ್ಟ್, ಎಡ್ವರ್ಡ್ ಸೈದ್ ಅವರ ಓರಿಯಂಟಲಿಸಂ, ಸಲ್ಮಾನ್ ರಶ್ದಿ ಅವರ ಮಿಡ್‌ನೈಟ್ಸ್ ಚಿಲ್ಡ್ರನ್, ಅರುಂಧತಿ ರಾಯ್ ಅವರ ದ ಗಾಡ್ ಆಫ್ ಸ್ಮಾಲ್ ಥಿಂಗ್ಸ್, ರಣಜಿತ್ ಗುಹಾ ಅವರ ಬರಹಗಳನ್ನು ಈ ಕಣ್ಣೋಟಗಳಲ್ಲೇ ಗ್ರಹಿಸಬಹುದಾಗಿದೆ.

ಭಾರತೀಯ ಸಾಹಿತ್ಯದಲ್ಲಿ ವಸಾಹತೋತ್ತರ ಚಿಂತನೆಯು ಬಹುಮುಖಿಯಾಗಿದೆ. ಇದನ್ನು ವಿಶ್ಲೇಷಿಸುವಾಗ ನಾವು ಪ್ರಮುಖವಾಗಿ ಮೂರು ಮಾದರಿಗಳನ್ನು ಗಮನಿಸಬೇಕು:

**ಗಾಯತ್ರಿ ಚಕ್ರವರ್ತಿ ಸ್ಪಿವಾಕ್:** ಇವರ "Can the Subaltern Speak?" (ದಮನಿತರು ಮಾತನಾಡಬಲ್ಲರೆ?) ಪ್ರಬಂಧವು ವಸಾಹತುಶಾಹಿಯ ನಂತರದ ಸಿದ್ಧಾಂತದ ಅತ್ಯಂತ ಪ್ರಭಾವಶಾಲಿ ಬರಹಗಳಲ್ಲಿ ಒಂದಾಗಿದೆ. ಇದರ ಮುಖ್ಯ ವೈಶಿಷ್ಟ್ಯವೆಂದರೆ; ದಮನಿತರ ಧ್ವನಿಯನ್ನು ಸಾಹಿತ್ಯ ಹೇಗೆ ಪ್ರತಿನಿಧಿಸಬೇಕು ಎಂಬುದರ ಮೇಲೆ ಬೆಳಕು ಚೆಲ್ಲುತ್ತದೆ. ಅಂದರೆ ಪಾಶ್ಚಿಮಾತ್ಯ ಶಿಕ್ಷಣ ತಜ್ಞರು ಮೂರನೇ ಜಗತ್ತಿನ ಜನರ ಬಗ್ಗೆ ಸಂಶೋಧನೆ ಮಾಡುವಾಗ ಹೊಂದಿರಬೇಕಾದ ನೈತಿಕ ಜವಾಬ್ದಾರಿಯನ್ನು ನೆನಪಿಸುತ್ತದೆ.

**ಹೋಮಿ ಕೆ. ಭಾಭಾ:** 'Mimicry' (ಅನುಕರಣೆ): ಭಾರತೀಯರು ಬ್ರಿಟಿಷರನ್ನು ಅನುಕರಿಸುವಾಗಲೂ ತಮ್ಮತನವನ್ನು ಹೇಗೆ ಉಳಿಸಿಕೊಂಡರು ಎಂಬುದನ್ನು ವಿವರಿಸುತ್ತಾರೆ. 'ಅನುಕರಣೆ' ಪರಿಕಲ್ಪನೆಯು ವಸಾಹತುಶಾಹಿ ನಂತರದ ಸಿದ್ಧಾಂತದ ಸಂದರ್ಭದಲ್ಲಿ ಬಹಳ

ಮುಖ್ಯವಾದುದು. ಈ ಕೃತಿಯ ಪ್ರಕಾರ ವಸಾಹತುಶಾಹಿ ಆಡಳಿತಗಾರರು ತಮ್ಮ ಅನುಕೂಲಕ್ಕಾಗಿ ಸ್ಥಳೀಯರನ್ನು ತಮ್ಮಂತೆಯೇ (ಭಾಷೆ, ಉಡುಗೆ, ನಡವಳಿಕೆ) ಬದಲಾಯಿಸಲು ಬಯಸಿದರು. ಆದರೆ, ಈ ಅನುಕರಣೆಯು ಎಂದಿಗೂ ಸಂಪೂರ್ಣವಾಗದೆ ಸಣ್ಣ ವ್ಯತ್ಯಾಸದೊಂದಿಗೆ ಉಳಿಯತೊಡಗಿತು. ಅನುಕರಣೆಯು ವಸಾಹತುಶಾಹಿ ಶಕ್ತಿಗೆ ಎರಡೂ ಕಡೆಯೂ ಹರಿತವಿರುವ ಕತ್ತಿಯಂತೆ ಕೆಲಸ ಮಾಡುತ್ತದೆ. ಅನುಕರಣೆಯು ಕೇವಲ ಗೌರವದ ಸೂಚನೆಯಲ್ಲ; ಅದು ವಸಾಹತುಶಾಹಿ ಸಂಸ್ಕೃತಿಯನ್ನು ಅಣಕಿಸುವಂತೆಯೂ ಇರಬಹುದು. ವಸಾಹತುಶಾಹಿಯು ಸೃಷ್ಟಿಸಿದ "ನಕಲಿ"ಯು ಅಸಲಿ ಅಧಿಕಾರಕ್ಕೆ ಬೆದರಿಕೆಯಾಗಿ ಅಥವಾ ವ್ಯಂಗ್ಯವಾಗಿ ಪರಿಣಮಿಸುತ್ತದೆ. ಭಾಭಾ ಅವರ ಪ್ರಕಾರ, ಸಬಾಲ್ಟರ್ನ್ ಅಥವಾ ವಸಾಹತುಶಾಹಿ ಪ್ರಜೆಗಳು ಉದ್ದೇಶಪೂರ್ವಕವಾಗಿ ಅಥವಾ ಅರಿವಿಲ್ಲದೆಯೇ ಅನುಕರಣೆಯ ಮೂಲಕ ಆಡಳಿತಗಾರರ ಅಧಿಕಾರವನ್ನು ಅಸ್ಥಿರಗೊಳಿಸುತ್ತಾರೆ. ಇದು ನೇರ ಸಂಘರ್ಷಕ್ಕಿಂತ ಭಿನ್ನವಾದ ಒಂದು ಸೂಕ್ಷ್ಮ ಪ್ರತಿರೋಧವಾಗಿದೆ ಎನ್ನುತ್ತಾರೆ. ಆದರಿಂದ ಈ ಕೃತಿಯು ವಸಾಹತುಶಾಹಿ ಆಡಳಿತಗಾರ ಮತ್ತು ಪ್ರಜೆಯ ನಡುವಿನ ಸಂಕೀರ್ಣ ಸಂಬಂಧವನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ.

**ಸಲ್ಮಾನ್ ರಶ್ದಿ:** ಇವರ 'ಮಿಡ್‌ನೈಟ್ಸ್ ಚಿಲ್ಡ್ರನ್' ಕೃತಿಯು ಭಾರತೀಯ ಸಾಹಿತ್ಯದ ಒಂದು ಮಹತ್ವದ ಕೃತಿಯಾಗಿದೆ. 1981ರಲ್ಲಿ ಪ್ರಕಟವಾದ ಈ ಕಾದಂಬರಿಯು ಭಾರತದ ಸ್ವಾತಂತ್ರ್ಯ ಮತ್ತು ವಿಭಜನೆಯ ನಂತರದ ಘಟನೆಗಳನ್ನು ಅದ್ಭುತವಾಗಿ ಚಿತ್ರಿಸುತ್ತದೆ. ರಶ್ದಿಯವರು ಇತಿಹಾಸ ಮತ್ತು ಕಲ್ಪನೆಯನ್ನು ಒಂದಕ್ಕೊಂದು ಬೆರೆಸಿ, ವಾಸ್ತವದ ಜೊತೆಗೆ ಮಾಂತ್ರಿಕ ಅಂಶಗಳನ್ನು ಸೇರಿಸಿ ಈ ಕಥೆಯನ್ನು ಬರೆದಿದ್ದಾರೆ. ಈ ಕಥೆಯ ನಾಯಕ (ಸಲೀಮ್ ಸಿನಾಯ್) 1947ರ ಆಗಸ್ಟ್ 15ರ ಮಧ್ಯರಾತ್ರಿ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕ ಕ್ಷಣದಲ್ಲಿ ಜನಿಸುತ್ತಾನೆ. ಅವನ ಜೀವನವು ಭಾರತದ ಏಳುಬೀಳುಗಳ ಜೊತೆಗೇ ಸಾಗುತ್ತಾ ಹೋಗುತ್ತದೆ. ಈ ಕಾದಂಬರಿಯಲ್ಲಿ ಕಾಣಿಕೊಳ್ಳುವ ಮಕ್ಕಳು ವಿಶೇಷ ಶಕ್ತಿಯುಳ್ಳವರಾಗಿರುತ್ತಾರೆ. ಜೊತೆಗೆ ಭಾರತದ ಸ್ವಾತಂತ್ರ್ಯ, ಪಾಕಿಸ್ತಾನದ ವಿಭಜನೆ, ಬಾಂಗ್ಲಾದೇಶ ವಿಮೋಚನಾ ಯುದ್ಧ ಮತ್ತು ಇಂದಿರಾ ಗಾಂಧಿಯವರ ತುರ್ತುಪರಿಸ್ಥಿತಿಯಂತಹ ಪ್ರಮುಖ ಘಟನೆಗಳು ಕಾದಂಬರಿಯಲ್ಲಿ ಹಾಸುಹೊಕ್ಕಾಗಿವೆ. ವಸಾಹತೋತ್ತರ ಭಾರತದ ಗೊಂದಲ ಮತ್ತು ರಾಜಕೀಯ ಅಸ್ಥಿರತೆಯನ್ನು ಮ್ಯಾಜಿಕಲ್ ರಿಯಲಿಸಂ ಮೂಲಕ ಕಟ್ಟಿಕೊಡುತ್ತದೆ. ವಸಾಹತುಶಾಹಿಯ ಕಪಿಮುಷ್ಟಿಯಿಂದ ಬಿಡುಗಡೆಯಾದ ದೇಶವೊಂದು ತನ್ನ ಅಸ್ತಿತ್ವಕ್ಕಾಗಿ ಪಡುವ ಪಾಡನ್ನು ಈ ಕೃತಿಯು ಅತ್ಯಂತ ಮಾರ್ಮಿಕವಾಗಿ ಚಿತ್ರಿಸುತ್ತದೆ.

### 4. ಕರ್ನಾಟಕದ ಸಂದರ್ಭ ಚಳುವಳಿ ಸ್ವರೂಪದ ಚಿಂತನಾ ಮಾದರಿಗಳು:

ಕನ್ನಡ ಸಾಹಿತ್ಯದಲ್ಲಿ ವಸಾಹತೋತ್ತರ ಚಿಂತನೆಯು ಅತ್ಯಂತ ಗಂಭೀರವಾಗಿ ಚರ್ಚಿಸಲ್ಪಟ್ಟಿದೆ ಎನ್ನಬಹುದು. ನಮ್ಮಲ್ಲಿ ಇದು ಕೇವಲ ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿರೋಧವಾಗಿರದೆ, 'ದೇಶಿ' ಮತ್ತು 'ಮಾರ್ಗ'ದ ನಡುವಿನ ಸಂಘರ್ಷವಾಗಿಯೂ ಮೂಡಿಬಂದಿದೆ. ಕನ್ನಡ ಸಾಹಿತ್ಯದಲ್ಲಿ ಆಧುನಿಕೋತ್ತರ ಎನ್ನುವುದು, 'ಆಧುನಿಕೋತ್ತರ' (ಆಧುನಿಕ+ಉತ್ತರ) ಕಾಲವನ್ನು ಎಲ್ಲಿಂದ ಮತ್ತು ಹೇಗೆ ಗುರುತಿಸಿಕೊಳ್ಳಬೇಕು ಎನ್ನುವ ಪ್ರಶ್ನೆಯೂ ಎದುರಾಗುತ್ತದೆ. ಈ ಗೊಂದಲವನ್ನು ಡಾ. ಸಿ. ಎನ್. ರಾಮಚಂದ್ರನ್ ಅವರು ತಮ್ಮ 'ವಸಾಹತೋತ್ತರ ಚಿಂತನೆ' ಪುಸ್ತಕದಲ್ಲಿ ಪಾಶ್ಚಾತ್ಯರ ಚಿಂತನೆಗಳೇನಿತ್ತು ಎನ್ನುವುದನ್ನು ಹೀಗೆ ಪ್ರಸ್ತಾಪಿಸುತ್ತಾರೆ: "ಮನರಂಜನೆಯೇ ಮುಖ್ಯವಾಗಿರುವ ಜನಪ್ರಿಯ ಸಾಹಿತ್ಯ, ಸಂಗೀತ ಇವೆಲ್ಲವೂ ಶ್ರೇಷ್ಠ ಸಂಸ್ಕೃತಿಯ ಶತ್ರುಗಳೆಂಬುದು ಲೀವಿಸ್, ರಿಚರ್ಡ್ಸ್, ಎಲಿಯಟ್ ಮುಂತಾದ

ಆಧುನಿಕತಾವಾದಿಗಳ ನಿಲುವು. –ಈ ನಿಲುವನ್ನು ವಿರೋಧಿಸುವ ವೈಚಾರಿಕತೆಯನ್ನು 'ಆಧುನಿಕೋತ್ತರವಾದ' ಎಂದು ಗುರುತಿಸಬಹುದು. ಇಲ್ಲಿ 'ಉತ್ತರ' ಶಬ್ದಕ್ಕೆ ಎರಡು ಅರ್ಥಗಳಿವೆ. 'ನಂತರ' ಮತ್ತು 'ವಿರುದ್ಧ'. ಅರ್ಥಾತ್ ಆಧುನಿಕವಾದದ ನಂತರ ಬಂದ ಮತ್ತು ಅದನ್ನು ವಿರೋಧಿಸುವ ವೈಚಾರಿಕತೆಯೇ 'ಆಧುನಿಕೋತ್ತರವಾದ' ಎನ್ನಲಾಗುತ್ತದೆ. ವಸಾಹತೋತ್ತರ ಎಂದರೆ ಕೇವಲ ಕಾಲಘಟ್ಟವಲ್ಲ, ಅದು ನಮ್ಮ ಮನಸ್ಥಿತಿಯಲ್ಲಿರುವ ಗುಲಾಮಗಿರಿಯನ್ನು ಕೊಡವಿಕೊಂಡು ಸ್ವತಂತ್ರವಾಗಿ ಆಲೋಚಿಸುವ ಒಂದು ಪ್ರಕ್ರಿಯೆ ಕಾಣಬೇಕಾಗುತ್ತದೆ ಕನ್ನಡ ಸಾಹಿತ್ಯವೂ ಈ ಹಿನ್ನೆಲೆಯಲ್ಲಿಯೆ ಸ್ಪಂದಿಸಿರುವುದನ್ನು ಕಾಣಬಹುದು.

"ಇಪ್ಪತ್ತನೆಯ ಶತಮಾನದ ಆರಂಭದ ಬರಹಗಾರರ ಚಿಂತನೆಗಳನ್ನು ಗಮನಿಸಬಹುದಾದರೆ ಬಿಎಂಶ್ರೀ ಅವರ 'ಕನ್ನಡ ಮಾತು ತಲೆ ಎತ್ತುವ ಬಗೆ'; ಕುವೆಂಪು ಅವರ 'ವಿದ್ಯಾರ್ಥಿ ಜೀವನದಲ್ಲಿ ಸಾಹಿತ್ಯದ ಅವಶ್ಯಕತೆ', 'ಮಕ್ಕಳಿಗೇಕೆ ವೈಚಾರಿಕತೆ?', 'ಮಕ್ಕಳ ಸಾಹಿತ್ಯಕ್ಕೆ ಆಧುನಿಕ ಮೌಲ್ಯಗಳು', 'ಕನ್ನಡ ದೀಕ್ಷೆ' ಮುಂತಾದ ಬರಹಗಳು; ಡಿವಿಜಿಯವರ 'ರಾಷ್ಟ್ರಕನಿಗೆ ಸಾಹಿತ್ಯ ಬೇಕೆ?'; ಬೇಂದ್ರೆಯವರ ನಾಡು–ನುಡಿಗೆ ಸಂಬಂಧಿಸಿದ ವಿಚಾರಗಳು, 'ಕನಸಿನೊಳಗೊಂದು ಕನಸು' ಮುಂತಾದ ಕವಿತೆಗಳು; ಜಿ.ಪಿ.ರಾಜರತ್ನಂ ಅವರ 'ಕನ್ನಡ ಪದಗೊಳ್'; ಮಾಸ್ತಿಯವರ 'ಸಾಹಿತ್ಯದ ಅವಶ್ಯಕತೆ'; ಆಧುನಿಕ ಶಿಕ್ಷಣ ವ್ಯವಸ್ಥೆಯನ್ನೇ ಅಣಕಿಸುವ ಟಿ.ಪಿ. ಕೈಲಾಸಂ ಅವರ 'ಟೊಳ್ಳು–ಗಟ್ಟಿ'– ಇವೇ ಮುಂತಾದ ಬರಹಗಳನ್ನು ಗಮನಿಸಬಹುದು". ಮುಂದುವರೆದು ಡಾ. ಯು.ಆರ್. ಅನಂತಮೂರ್ತಿ: ಅವರ 'ಸಂಸ್ಕಾರ' ಮತ್ತು 'ಭಾರತೀಪುರ' ಕಾದಂಬರಿಗಳು ವಸಾಹತೋತ್ತರ ಕಾಲದ ಆಧುನಿಕತೆ ಮತ್ತು ಸಂಪ್ರದಾಯದ ನಡುವಿನ ತಿಕ್ಕಾಟವನ್ನು ಅದ್ಭುತವಾಗಿ ಚಿತ್ರಿಸುತ್ತವೆ. ಕಿಕ್ಕೇರಿ ನಾರಾಯಣ ವಸಾಹತೋತ್ತರ ನೆಲೆಯಲ್ಲಿ ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ಹೇಗೆ ವಿಶ್ಲೇಷಿಸಬೇಕು ಎಂಬುದರ ಕುರಿತು ಇವರು ಗಂಭೀರ ಚಿಂತನೆ ನಡೆಸಿದ್ದಾರೆ. ಅದೇ ರೀತಿ ಲಕ್ಷ್ಮೀಶ ತೋಳ್ಪಾಡಿ ರಾಮಾಯಣ, ಮಹಾಭಾರತಗಳಂತಹ ಮಹಾಕಾವ್ಯಗಳನ್ನು ವಸಾಹತೋತ್ತರ ಮನಸ್ಥಿತಿಯಿಂದ ಬಿಡಿಸಿ ನೋಡುವ ಹೊಸ ದೃಷ್ಟಿಕೋನವನ್ನು ನೀಡುತ್ತಾರೆ. ದೇವನೂರ ಮಹಾದೇವ ಅವರ ಸಾಹಿತ್ಯವು 'ದಲಿತ ಮತ್ತು ಬಂಡಾಯ' ಚಳುವಳಿಯ ಭಾಗವಾಗಿದ್ದರೂ, ಅದು ಮೂಲತಃ ವಸಾಹತೋತ್ತರ ಭಾರತದ ಒಳಗಿನ ಶೋಷಣೆಯ ವಿರುದ್ಧದ "ದೇಶಿ" ಧ್ವನಿಯಾಗಿದೆ ಎನ್ನುತ್ತಾರೆ.

**5. ಸಾಮಾಜಿಕ ಮಾಧ್ಯಮಗಳು ವಸಾಹತೋತ್ತರ ಸಾಹಿತ್ಯದ ಅಂತರ ಸಂಬಂಧ:**

ಸಾಮಾಜಿಕ ಮಾಧ್ಯಮಗಳು ಮತ್ತು ವಸಾಹತೋತ್ತರ ಸಾಹಿತ್ಯದ ನಡುವಿನ ಸಂಬಂಧವು ಸಮಕಾಲೀನ ಸಾಂಸ್ಕೃತಿಕ ಅಧ್ಯಯನದಲ್ಲಿ ಅತ್ಯಂತ ಮಹತ್ವದ ಸಾಂಸ್ಕೃತಿಕ ಅಧ್ಯಯನದ ಆಧುನಿಕ ಮಗ್ಗುಲುಗಳನ್ನು ಪರಿಚಯಿಸುತ್ತದೆ. ಆಧುನಿಕ ಡಿಜಿಟಲ್ ಯುಗದಲ್ಲಿ ವಸಾಹತೋತ್ತರ ಸಾಹಿತ್ಯ ಸಾಮಾಜಿಕ ಮಾಧ್ಯಮಗಳ ಪ್ರಭಾವ ಮತ್ತು ಅಂತರ ಸಂಬಂಧ ವಸಾಹತೋತ್ತರ ಸಾಹಿತ್ಯವು ಮೂಲಭೂತವಾಗಿ ಅಧಿಕಾರ ಕೇಂದ್ರಗಳನ್ನು ಪ್ರಶ್ನಿಸುವ, ಅಸ್ಮಿತೆಯನ್ನು ಹುಡುಕುವ ಮತ್ತು ವಸಾಹತುಶಾಹಿ ಹೇರಿದ ಸಾಂಸ್ಕೃತಿಕ ಮೌಲ್ಯಗಳನ್ನು ವಿಮರ್ಶಿಸುವ ಒಂದು ಸೃಜನಶೀಲ ಚಳವಳಿ ಎಂದೇ ಪರಿಭಾವಿಸಬಹುದು.

**ವಾಕ್ ಸ್ವಾತಂತ್ರ್ಯದ ಪ್ರಜಾಪ್ರಭುತ್ವೀಕರಣ:** ವಸಾಹತುಶಾಹಿ ಕಾಲದಲ್ಲಿ ಯಾರು ಬರೆಯಬೇಕು? ಏನನ್ನು ಬರೆಯಬೇಕು? ಮತ್ತು ಯಾವುದು ಸಾಹಿತ್ಯ? ಎಂಬುದನ್ನು

ನಿರ್ಧರಿಸುವ ಅಧಿಕಾರ ಕೇವಲ ಯುರೋಪಿಯನ್ ರ ಅಥವಾ ಮೇಲ್ವರ್ಗದ ಪ್ರಕಾಶನ ಸಂಸ್ಥೆಗಳ ಬಳಿಯಿತ್ತು. ಆದರೆ ಇಂದು ಸಾಮಾಜಿಕ ಮಾಧ್ಯಮಗಳು ಈ "ಗೇಟ್-ಕೀಪಿಂಗ್" ಪದ್ಧತಿಯನ್ನು ಮುರಿದೆಸೆದಿವೆ. ದಲಿತ, ಬುಡಕಟ್ಟು, ಮಹಿಳೆಯರು ಮತ್ತು ಲೈಂಗಿಕ ಅಲ್ಪಸಂಖ್ಯಾತರ ಧ್ವನಿಗಳು ಪ್ರಕಾಶಕರ ಹಂಗಿಲ್ಲದೆ ನೇರವಾಗಿ ಜಾಗತಿಕ ವೇದಿಕೆಯನ್ನು ತಲುಪುತ್ತಿವೆ. ಇದು ವಸಾಹತೋತ್ತರ ಚಿಂತನೆಯ ಆಶಯವಾದ 'ಅಂಚಿನ ಧ್ವನಿಗಳಿಗೆ ವೇದಿಕೆ' ನೀಡುವುದನ್ನು ಡಿಜಿಟಲ್ ರೂಪದಲ್ಲಿ ಸಾಕಾರಗೊಳಿಸಿದೆ ಎನ್ನಬಹುದು.

**ಮರು ಪ್ರತಿಕ್ರಿಯೆ/ ಮರಳಿ ಉತ್ತರ ನೀಡುವುದು (Writing Back):** ನಮ್ಮನ್ನು ಆಳಿದ ವಸಾಹತುಶಾಹಿಗಳು ನಮ್ಮ ಬಗ್ಗೆ ಬರೆದ ತಪ್ಪು ಕಲ್ಪನೆಗಳಿಗೆ ಅಥವಾ ಅವರ ಸಾಹಿತ್ಯಕ್ಕೆ ನಮ್ಮದೇ ಆದ ದೃಷ್ಟಿಕೋನದಲ್ಲಿ ಮರುಉತ್ತರ ನೀಡುವುದೇ 'ರೈಟಿಂಗ್ ಬ್ಯಾಕ್'. ಇಂದು ಇದು ಟ್ವಿಟರ್ (ಎಕ್ಸ್), ಫೇಸ್‌ಬುಕ್, ಇನ್‌ಸ್ಟಾಗ್ರಾಮ್, ಬ್ಲಾಗ್ ಗಳ ಮೂಲಕ ಸ್ಪಷ್ಟವಾಗಿ ಗೋಚರಿಸುತ್ತದೆ. ಇನ್‌ಸ್ಟಾಗ್ರಾಮ್ ಅಥವಾ ಫೇಸ್‌ಬುಕ್‌ನಲ್ಲಿ ಲೇಖಕರು ಇಂಗ್ಲಿಷ್ ಭಾಷೆಯನ್ನು ಅದರ ಮೂಲ ರೂಪದಲ್ಲಿ ಬಳಸದೆ, ತಮ್ಮ ಪ್ರಾದೇಶಿಕ ಭಾಷೆಯ ಸೊಗಡಿನೊಂದಿಗೆ ಬೆರೆಸಿ ಬಳಸುತ್ತಿದ್ದಾರೆ. ಇದು ಭಾಷೆಯ ಮೇಲಿನ ವಸಾಹತುಶಾಹಿ ಹಿಡಿತವನ್ನು ಸಡಿಲಗೊಳಿಸುವ ಒಂದು ಸೃಜನಶೀಲ ಪ್ರತಿರೋಧವಾಗಿದೆ ಎನ್ನಬಹುದು. ಆ ಕಾಲದಲ್ಲಿ ವಸಾಹತು ಚಿಂತನೆಗಳನ್ನು ವಿರೋಧಿಸುವ ಪುಸ್ತಕಗಳಿಗೆ ಕಾಯಬೇಕಿದ್ದ ಸಂದರ್ಭವು ಬದಲಾಗಿ ಇಂದು ಜಾಗತಿಕ ವೇದಿಕೆಯಲ್ಲಿ ತಕ್ಷಣವೇ ಕೌಂಟರ್ ಮಾಡಬಹುದು. ಈ ಬಗೆಯ ಡಿಜಿಟಲ್ ಕೌಂಟರ್ ಡಿಸ್ಕೋರ್ಸ್ ನಿರ್ಮಾಣವಾಗಿರುವುದನ್ನು ಕಾಣಬಹುದು.

**ಸಂಕಥನದ ಮರು ನಿರ್ಮಾಣ:** ಸಾಮಾಜಿಕ ಮಾಧ್ಯಮಗಳು ಇತಿಹಾಸದ ಮರುಚಿಂತನೆಗೆ ದೊಡ್ಡ ಶಕ್ತಿಯನ್ನು ನೀಡಿವೆ. ವಿಸ್ಮೃತಿಯಿಂದ ಆಚೆ ಬಂದು ತಮ್ಮ ಚರಿತ್ರೆಯನ್ನು ಮರುಸೃಷ್ಟಿಸಿಕೊಳ್ಳಲಾಗುತ್ತಿದೆ. ವಸಾಹತುಶಾಹಿ ಇತಿಹಾಸಕಾರರು ನಿರ್ಲಕ್ಷಿಸಿದ ಸ್ಥಳೀಯ ವೀರರ ಕಥೆಗಳು, ಜಾನಪದ ನಂಬಿಕೆಗಳು ಮತ್ತು ಮೌಖಿಕ ಪರಂಪರೆಗಳು ಇಂದು ಯೂಟ್ಯೂಬ್, ಫೇಸ್‌ಬುಕ್, ಬ್ಲಾಗ್ ಮತ್ತು ಪೋಸ್ಟ್ ಳ ಮೂಲಕ ಸಾಹಿತ್ಯದ ಮುಖ್ಯವಾಹಿನಿಗೆ ಬರುತ್ತಿವೆ. ಹ್ಯಾಶ್‌ಟ್ಯಾಗ್ ಅಭಿಯಾನಗಳು ಒಂದು ರೀತಿಯಲ್ಲಿ 'ಡಿಜಿಟಲ್ ಕಾವ್ಯ'ವಾಗಿ ರೂಪಾಂತರಗೊಂಡು ಸಾಮಾಜಿಕ ನ್ಯಾಯದ ಪರವಾಗಿ ಧ್ವನಿ ಎತ್ತುತ್ತಿವೆ.

**ಡಿಜಿಟಲ್ ವಸಾಹತುಶಾಹಿ:** ನಾವು ಸಾಮಾಜಿಕ ಮಾಧ್ಯಮಗಳನ್ನು ಮುಕ್ತ ವೇದಿಕೆ ಎಂದು ಕರೆದರೂ, ಅಲ್ಲಿ ಒಂದು ಹೊಸ ರೀತಿಯ ವಸಾಹತುಶಾಹಿ ಅಡಗಿದೆ ಎಂಬ ಗಂಭೀರ ಆರೋಪವಿದೆ. ಅದನ್ನು ಅಲ್ಗಾರಿದಮ್ ನಿಯಂತ್ರಣ ಎನ್ನಲಾಗುತ್ತದೆ. ಗೂಗಲ್ ಅಥವಾ ಮೆಟಾದಂತಹ ಜಾಗತಿಕ ತಂತ್ರಜ್ಞಾನ ಕಂಪನಿಗಳ 'ಅಲ್ಗಾರಿದಮ್'ಗಳು ನಮ್ಮ ಆಲೋಚನೆಗಳನ್ನು ನಿಯಂತ್ರಿಸುತ್ತಿವೆ. ಯಾವ ವಿಷಯ "ವೈರಲ್" ಆಗಬೇಕು, ಯಾವುವು ಮುಖ್ಯವಾಹಿನಿಗೆ ತಲುಪಬಾರದು ಎಂಬುದನ್ನು ಅವು ನಿರ್ಧರಿಸುತ್ತವೆ. ಇದು ವಸಾಹತೋತ್ತರ ಸಾಹಿತ್ಯವು ಎದುರಿಸುತ್ತಿರುವ ನವ-ವಸಾಹತುಶಾಹಿ ಸವಾಲು ಎಂದರೆ ತಪ್ಪಾಗಲಾರದು.

**ಸಾಹಿತ್ಯದ ಸ್ವರೂಪ ಬದಲಾವಣೆ:** ಸಾಮಾಜಿಕ ಮಾಧ್ಯಮಗಳ ಪ್ರಭಾವದಿಂದ ಸಾಹಿತ್ಯದ ಗಾತ್ರ ಕುಗ್ಗಿದೆ. ಸುದೀರ್ಘ ಕಾದಂಬರಿಗಳಿಗಿಂತ ಟ್ವಿಟರ್ ಕವಿತೆಗಳು ಅಥವಾ ಫೇಸ್‌ಬುಕ್ ಲೇಖನಗಳು ಹೆಚ್ಚು ಪ್ರಭಾವ ಬೀರುತ್ತಿವೆ. ಇದು ಓದುಗ ಮತ್ತು ಲೇಖಕನ ನಡುವಿನ ಅಂತರವನ್ನು ಕಡಿಮೆ ಮಾಡಿದೆ. ಇದರ ಜೊತೆಗೆ ಸ್ಥಳೀಯ ಕಲೆ ಸಾಹಿತ್ಯ ಸಂಗೀತವನ್ನು ಜಾಗತಿಕ ಹಂತಕ್ಕೆ ಕೊಂಡೊಯ್ಯುವಾಗ ಅವುಗಳನ್ನು ಸರಕುಗಳನ್ನಾಗಿ

ಬದಲಾಯಿಸುವ ಅಪಾಯ ಇಲ್ಲದಿಲ್ಲ.

**ಸಮಾರೋಪ:**

ಸಾಮಾಜಿಕ ಮಾಧ್ಯಮಗಳು ವಸಾಹತೋತ್ತರ ಸಾಹಿತ್ಯದ ಅಂತರ್ ಸಂಬಂಧವು ಸಂಕೀರ್ಣವಾದುದು. ಸಾಮಾಜಿಕ ಮಾಧ್ಯಮಗಳು ವಸಾಹತೋತ್ತರ ಸಾಹಿತ್ಯಕ್ಕೆ ಒಂದು ನವ ಚಲನಶೀಲತೆಯನ್ನು ನೀಡಿವೆ. ಇವು ಸಾಹಿತ್ಯವನ್ನು ಕೇವಲ ಶೈಕ್ಷಣಿಕ ಚರ್ಚೆಯಾಗಿ ಉಳಿಸದೆ, ಸಾಮಾನ್ಯ ಜನರ ಅಸ್ಮಿತೆಯ ಹೋರಾಟದ ಬಗೆಯನ್ನು ಬದಲಿಸಿವೆ. ಒಂದು ಕಡೆ ವಸಾಹತುಶಾಹಿ ಒಡೆತನವನ್ನು ಪ್ರಶ್ನಿಸಲು ಸಡಿಲವಾದ ವೇದಿಕೆಯನ್ನು ನೀಡಿದರೆ ಇನ್ನೊಂದು ಕಡೆ ತಾಂತ್ರಿಕ ಸಾಮ್ರಾಜ್ಯಶಾಹಿಯ ಅಡಿಯಲ್ಲಿ ಎಲ್ಲರನ್ನು ಸಿಲುಕಿಸಿವೆ. ಇಂತಹ ಸಂದರ್ಭಗಳಲ್ಲಿ ಲೇಖಕ ತನ್ನ ಸ್ವಂತಿಕೆಯನ್ನು ಉಳಿಸಿಕೊಳ್ಳುವ ಅನಿವಾರ್ಯತೆ ಇದೆ. ಸಾಮಾಜಿಕ ಮಾಧ್ಯಮಗಳು/ ಜಾಲತಾಣಗಳು ವಸಾಹತೋತ್ತರ ಸಾಹಿತ್ಯಕ್ಕೆ ಹೊಸ ವೇದಿಕೆಯನ್ನು ನೀಡಿವೆ ನಿಜ, ಆದರೆ ಅವುಗಳು ತಾವೇ ಸ್ವತಃ ಹೊಸ ರೀತಿಯ ಅಧಿಕಾರ ಕೇಂದ್ರಗಳಾಗುತ್ತಿವೆ. ಹಾಗಾಗಿ, ಇಂದಿನ ವಸಾಹತೋತ್ತರ ಸಾಹಿತ್ಯವು ಕೇವಲ ಬ್ರಿಟಿಷ್ ಆಳ್ವಿಕೆಯ ನೆನಪುಗಳನ್ನು ಮಾತ್ರವಲ್ಲದೆ, ಇಂದಿನ ಡಿಜಿಟಲ್ ಅಧಿಪತ್ಯವನ್ನೂ ಪ್ರಶ್ನಿಸುವ 'ತಾಂತ್ರಿಕ ಜಾಗೃತಿ'ಯನ್ನು ಹೊಂದಿರಬೇಕಾದ ಅಗತ್ಯವಿದೆ. ಈ ಡಿಜಿಟಲ್ ಮಾಧ್ಯಮಗಳ ಒಡೆತನ ಮತ್ತು ಅವುಗಳ ಮಿತಿಗಳ ಬಗ್ಗೆ ನಾವು ಸದಾ ಎಚ್ಚರದಿಂದ ಇರುವುದು ಅನಿವಾರ್ಯ.

**ಪರಾಮರ್ಶನ ಗ್ರಂಥಗಳು:**


1. ಕಮಲ ವೈ.ಸಿ., ಡಿಜಿಟಲ್ ಕ್ರಾಂತಿ ಮತ್ತು ಭಾರತ, ಬೆಂಗಳೂರು: ಕುವೆಂಪು ಭಾಷಾ ಭಾರತಿ ಪ್ರಾಧಿಕಾರ.
2. ರಾಮಚಂದ್ರನ್ ಸಿ. ಎನ್., (2002), ವಸಾಹತೋತ್ತರ ಚಿಂತನೆ, ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ.
3. ರಾಮಚಂದ್ರನ್ ಸಿ. ಎನ್., (2008), ಸಾಹಿತ್ಯ ವಿಮರ್ಶೆ, ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ.
4. ಶಿವರುದ್ರಪ್ಪ ಜಿ. ಎಸ್., (2016), ಹೊಸಗನ್ನಡ ಸಾಹಿತ್ಯ ಸಮೀಕ್ಷೆ, ಬೆಂಗಳೂರು: ಸಪ್ನ ಬುಕ್ ಹೌಸ್.
5. ರಾಘವೇಂದ್ರರಾವ್ ಎಚ್. ಎಸ್. (ಸಂ), (2001), ಶತಮಾನದ ಸಾಹಿತ್ಯ ವಿಮರ್ಶೆ, ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ.
6. ಶೇಷಗಿರಿ ರಾವ್ ಎಲ್. ಎಸ್., (2016), ಹೊಸಗನ್ನಡ ಸಾಹಿತ್ಯ, ಬೆಂಗಳೂರು: ಸಪ್ನ ಬುಕ್ ಹೌಸ್.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.